ಬಳ್ಳಾರಿ ಜಿಲ್ಲೆಯಲ್ಲಿರುವ ಗುತ್ತಿಗೆದಾರರ ಬಗ್ಗೆ.

೨೮೯. ಶ್ರೀ ಬಿ. ಜೆಡ್. ಜಂಕಾ ನಾಯಕ್ (ಹರಪನಹಳ್ಳಿ).—ಮಾನ್ಯ ನಗರಾಭಿವೃದ್ಧಿ ಮತ್ತು ಲೋಕೋಪಯೋಗಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯ ಮಟ್ಟದಲ್ಲಿ ಸರ್ಕಾರದಿಂದ ಗುತ್ತಿಗೆದಾರರುಗಳಿಗೆ (ನೀರಾವರಿ ಮತ್ತು ಲೋಕೋಪಯೋಗಿ ಇಲಾಖೆ ಸೇರಿ) ಬರಬೇಕಾಗಿರುವ ಬಾಕಿ ಹಣವೆಷ್ಟು ?

ಆ) ಬಳ್ಳಾರಿ ಜಿಲ್ಲೆಯಲ್ಲಿರುವ ಗುತ್ತಿಗೆದಾರರಿಗೆ ಸರ್ಕಾರದಿಂದ ಬಾಕಿ ಬರುವ ಹಣ ಎಷ್ಟು (ತಾಲ್ಲೂಕುವಾರು ವಿವರ ನೀಡುವುದು).

ಶ್ರೀ ಎಂ. ಚಂದ್ರಶೇಖರ್ (ನಗರಾಭಿವೃದ್ಧಿ ಮತ್ತು ಲೋಕೋಪಯೋಗಿ ಸಚಿವರು).—

ಅ) ೧-೫-೮೮ರಂತೆ ೫೦.೧೯ ಕೋಟಿ ರೂ.ಗಳು (ನೀರಾವರಿಯನ್ನೂ ಸೇರಿದಂತೆ)

ಆ) ೧-೫-೮೮ರಂತೆ ೧೪೮.೨೬ ಲಕ್ಷ ರೂ.ಗಳು ತಾಲ್ಲೂಕುವಾರು ವಿವರಗಳನ್ನು ಕೆಳಗೆ ಕೊಡಲಾಗಿದೆ.

ತಾಲ್ಲೂಕು	ಲಕ್ಷ ರೂ.ಗಳಲ್ಲಿ
ಬಳ್ಳಾರಿ	೫೧.೧೧
ಹಡಗಲಿ	೮.೦೦
ಹಗರಿಬೊಮ್ಮನಹಳ್ಳಿ	೨.೫೯
ಹರಪನಹಳ್ಳಿ	೭.೦೨
ಹೊಸಪೇಟೆ	೩೧.೯೫
ಸಂಡೂರು	೨೯.೮೦
ಸಿರಗುಪ್ಪ	೧೬.೨೮
ಕೂಡ್ಲಿಗಿ	೧.೭೧
ಒಟ್ಟು	೧೪೮.೨೬

ಘಟಪ್ರಭಾ ಬಲದಂಡೆ ಕಾಲುವೆ ಕುರಿತಂ.

೧೫೬೮. ಶ್ರೀ ಎಂ. ಎಲ್. ಮುನ್ನಣ್ಣನವರ್.—(ಮಾನ್ಯ ಕಂದಾಯ, ಯೋಜನಾ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಘಟಪ್ರಭಾ ಬಲದಂಡೆ ಕಾಲುವೆಗೆ ಬೇಕಾಗುವ ಅಂದಾಜು ಹಣವೆಷ್ಟು ?

ಆ) ಕಡಬಗಟ್ಟಿ ಟನೆಲ್ ಮುಗಿಯಲು ಬೇಕಾಗುವ ಕಾಲಾವಧಿ ಎಷ್ಟು ಮತ್ತು ಇದಕ್ಕೆ ಬೇಕಾಗುವ ಅಂದಾಜು ಹಣವೆಷ್ಟು ?

ಇ) ಘಟಪ್ರಭಾ ಬಲದಂಡೆ ಕಾಲುವೆ ಕೆಲಸ ೯೫ ಕಿ.ಮೀ. ವರೆಗೆ ಮುಂದುವರಿಸಲು ಇರುವ ತೊಂದರೆಗಳೇನು ?

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ, ಯೋಜನಾ ಮತ್ತು ನೀರಾವರಿ ಸಚಿವರು).—

ಅ) ಸುಮಾರು ೧೫೦.೪೦ ಕೋಟಿ ರೂ.ಗಳು (ಬಾಕಿ ಕೆಲಸಗಳಿಗೆ)

ಆ) ಜುಲೈ ೧೯೮೯ ಸುಮಾರು ೬೫೬ ಲಕ್ಷ ರೂ.ಗಳು.

ಇ) ಯಾವುದೇ ತೊಂದರೆ ಇರುವುದಿಲ್ಲ, ಹಣಕಾಸಿನ ಲಭ್ಯತೆಯನ್ನು ಅವಲಂಬಿಸಿ ಕೆಲಸವನ್ನು ಕೈಗೆತ್ತಿಕೊಳ್ಳಲಾಗುತ್ತಿದೆ.